# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ–153/ವಾರ್ಡ್ ಸಭೆ/2020–21 ದಿನಾಂಕ:01/01/2021

## ವಾರ್ಡ್ –153ರ ವಾರ್ಡ್ ಸಭೆಯ ನಡವಳಿ

ದಿನಾಂಕ:01/01/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್–153ರ ವಾರ್ಡ್ ಕಛೇರಿಯಲ್ಲಿ ಶ್ರೀಮತಿ. ವರಲಕ್ಷ್ಮಿ ಸಹಾಯಕ ಆಯುಕ್ತರು, (ಆಡಳಿತ) ದಕ್ಷಿಣ ವಲಯ ವಾರ್ಡ್ 153ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ವರಲಕ್ಷ್ಮಿ | ಸಹಾಯಕ ಆಯುಕ್ತರು (ಆಡಳಿತ) ದಕ್ಷಿಣ ವಲಯ | ಹಾಜರಿದ್ದರು |
| 2 | ಶ್ರೀ. ನರಸಿಂಹಯ್ಯ ಎಸ್. | ಕಿರಿಯ ಅಭಿಯಂತರರು ವಾರ್ಡ್–153–ಜಯನಗರ | ಹಾಜರಿದ್ದರು |
| 3 | ಶ್ರೀ. ರಾಘವೇಂದ್ರ ಹಿಚೇರಿ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–153 | ಹಾಜರಿದ್ದರು |
| 3 | ಶ್ರೀ. ವಿದ್ಯಾಧರ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–153 | ಹಾಜರಿದ್ದರು |
| 4 | ಶ್ರೀ. ರೇಣುಕಯ್ಯ | ಮೌಲ್ಯಮಾಪಕರು ಸ.ಕಂ. ಅಧಿಕಾರಿ ಕಛೇರಿ | ಹಾಜರಿದ್ದರು |
| 5 | ಶ್ರೀ. ಮೂರ್ತಿ | ಸಹಾಯಕ ಅಭಿಯಂತರರು ಬೆಸ್ಕಾಂ ಇಲಾಖೆ | ಹಾಜರಿದ್ದರು |

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ. ಲಕ್ಷ್ಮೀಶ | ಸದಸ್ಯರು | ಹಾಜರಿದ್ದರು |
| 2 | ಶ್ರೀ. ಭೀಮಪ್ಪ | ಸದಸ್ಯರು | ಹಾಜರಿದ್ದರು |
| 3 | ಶ್ರೀಮತಿ. ಪ್ರಮೀಳಾ | ಸದಸ್ಯರು | ಹಾಜರಿದ್ದರು |
| 4 | ಶ್ರೀಮತಿ. ಶಾನ್ ಅಹಮದ್ | ಸದಸ್ಯರು | ಹಾಜರಿದ್ದರು |

ಮು.ತಿ.ನೋ..



Scanned with CamScanner

| ಕ್ರಮ ಸಂಖ್ಯೆ | ಸ್ಥಳೀಯರ ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಪ್ರದೀಪ್ ಮಡೋನ | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ಕಮಲ್ | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ನಿಗಧಿತ ಸಮಯಕ್ಕೆ ಪ್ರಾರಂಭಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ವರಲಕ್ಷ್ಮಿ, ಸಹಾಯಕ ಆಯುಕ್ತರು (ಆಡಳಿತ) ರವರು ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಮತ್ತೊಮ್ಮೆ ಚರ್ಚಿಸಿದರು ವಿವರಗಳು ಈ ಕೆಳಕಂಡಂತಿವೆ.

1. **ವಾರ್ಡಿನಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಶ್ರೀಮತಿ. ವರಲಕ್ಷ್ಮಿ, ಸಹಾಯಕ ಆಯುಕ್ತರು (ಆಡಳಿತ) ರವರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ, ಮನೆ ಮನೆಯಿಂದ ಕಸ ಸಂಗ್ರಹಣೆ ಮತ್ತು ಸ್ವಚ್ಛತೆ ಕಾಪಾಡಿಕೊಳ್ಳುವ ಬಗ್ಗೆ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀಮತಿ. ಪ್ರಮೀಳಾ ರವರು ಮಾತನಾಡಿ, ಸೋಮೇಶ್ವರನಗರ 1ನೇ ಅಡ್ಡರಸ್ತೆ, 2ನೇ ಅಡ್ಡರಸ್ತೆ ಮತ್ತು 3ನೇ ಅಡ್ಡರಸ್ತೆಗಳಲ್ಲಿ ಸೊಳ್ಳೆ ಔಷದಿ ಸಿಂಪಡಿಸುವಂತೆ ಕೋರಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ. ರಾಘವೇಂದ್ರ ಹಿಜೇರಿ ರವರು ಉತ್ತರಿಸಿ ಈ ವಿಷಯವಾಗಿ ಸೂಕ್ತ ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

2. **ಒಂಟಿ ಮನೆ ನಿರ್ಮಾಣದ ಬಗ್ಗೆ:-**

- ಸಭೆಯಲ್ಲಿ ಹಾಜರಿದ್ದ ವಾರ್ಡಿನ ಸದಸ್ಯರಾದ ಶ್ರೀ. ಲಕ್ಕೀಶ ರವರು ಮಾತನಾಡಿ ಒಂಟಿ ಮನೆ ನಿರ್ಮಾಣದ ಸಂಬಂಧ ಬಿಲ್‌ಗಳ ಪಾವತಿಗಳ ಬಗ್ಗೆ ವಿವರಣೆ ಕೇಳಿದರು. ಈ ವಿಷಯವಾಗಿ ಅಧ್ಯಕ್ಷರಾದ ಶ್ರೀಮತಿ. ವರಲಕ್ಷ್ಮೀ ಸಹಾಯಕ ಆಯುಕ್ತರು (ಆಡಳಿತ) ರವರು ಸಭೆಯಿಂದಲೇ ಕಾರ್ಯಪಾಲಕ ಅಭಿಯಂತರರು (ಟೆಕ್ಕಪೇ) ವಿಭಾಗ ರವರಿಗೆ ಕರೆ ಮಾಡಿ ಈ ಬಗ್ಗೆ ವರದಿಯನ್ನು ಪಡೆದು ಸದಸ್ಯರಿಗೆ ವಿವರ ನೀಡಿದರು.

3. **ಬೆಸ್ಕಾಂ ವಿಭಾಗ :-**

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮಡೋನ ರವರು ಮಾತನಾಡಿ ಬಿಹೆಚ್‌ಇಎಲ್ ಲೇಔಟ್‌ನಲ್ಲಿ ವಿದ್ಯುತ್ ಕಂಬಗಳಿಗೆ ದೀಪದ ವ್ಯವಸ್ಥೆ ಹಾಳಾಗಿದ್ದು, ಸರಿಪಡಿಸುವಂತೆ ಕೋರಿದರು ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಯವರು ಉತ್ತರಿಸಿ ಅತಿ ಶೀಘ್ರವಾಗಿ ಈ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿದರು.

ಮು.ತಿ.ನೋ.



Scanned with CamScanner

4. **ವಾರ್ಡಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ:-**

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಬಾಲ್ಡ್‌ವಿನ್ ಶಾಲೆ ರಸ್ತೆಗೆ ಕಾಂಕ್ರಿಟ್ ಅಳವಡಿಸುವ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಕಮಲ್ ರವರು ಮಾತನಾಡಿ ಬಾಲ್ಡ್‌ವಿನ್ ಶಾಲೆ ರಸ್ತೆಗೆ ಕಾಂಕ್ರಿಟ್ ಅಳವಡಿಸುವ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಬಾಲ್ಡ್‌ವಿನ್ ಶಾಲೆ ರಸ್ತೆಯಲ್ಲಿರುವ ಖಾಲಿ ನಿವೇಶನದಲ್ಲಿ ಅನಧಿಕೃತವಾಗಿ ಬಿದ್ದಿರುವ ಡೆಬ್ರಿಸ್ ತೆರವುಗೊಳಿಸುವಂತೆ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಈ ಬಗ್ಗೆ ಕ್ರಮ ವಹಿಸಿ ಡೆಬ್ರಿಸ್ ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಚಿಕನ್‌ಕೌಂಟಿ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ಬಿದ್ದಿರುವ ಡೆಬ್ರಿಸ್ ತೆರವುಗೊಳಿಸುವಂತೆ ಕೋರಿದರು. ಈ ವಿಷಯವಾಗಿ ಸಭೆಯಲ್ಲಿ ಚರ್ಚಿಸಿ ದಿನಾಂಕ:11-01-2021 ರಂದು ಸಾಮೂಹಿಕ ಸ್ವಚ್ಛತಾ ಕಾರ್ಯವನ್ನು ಹಮ್ಮಿಕೊಳ್ಳುವಂತೆ ತೀರ್ಮಾನ ಮಾಡಲಾಯಿತು. ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಈ ವಿಷಯವನ್ನು ಪತ್ರ ಮುಖೇನ ರವಾನಿಸುವಂತೆ ನಿರ್ಧರಿಸಲಾಯಿತು.
- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಬಿಹೆಚ್‌ಇಎಲ್ ಪಾರ್ಕ್ ಮುಂಭಾಗ ಬೋರ್‌ವೆಲ್ ಕೊರೆದಿರುವ ಬಗ್ಗೆ ವಿವರವನ್ನು ಕೋರಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ವಾರ್ಡಿನ ಅಭಿಯಂತರರು ಉತ್ತರಿಸಿ ವಿವರಗಳನ್ನು ಒದಗಿಸುವುದಾಗಿ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/ | Lravalakshmi<br>ಸಹಿ/ |
| (ನರಸಿಂಹಯ್ಯ ಎನ್.) | (ವರಲಕ್ಷ್ಮಿ) |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್-153 ಜಯನಗರ | ವಾರ್ಡ್-153 ಜಯನಗರ |



Scanned with CamScanner